# ಭಾಗ II
# ರಾಜಸ್ವ/ವರಮಾನ ಲೆಕ್ಕಪರಿಶೋಧನೆ

# ಅಧ್ಯಾಯ I

# ಅಧ್ಯಾಯ–I

## ಸಾಮಾನ್ಯ

### 1.1 ರಾಜಸ್ವ ಸ್ವೀಕೃತಿಗಳ ಪ್ರವೃತಿ

ಕರ್ನಾಟಕ ಸರ್ಕಾರವು 2019–20 ಸಾಲಿನಲ್ಲಿ ಸಂಗ್ರಹಿಸಿದ ತೆರಿಗೆ ಮತ್ತು ತೆರಿಗೆಯೇತರ ರಾಜಸ್ವ/ವರಮಾನ, ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರದ ವಿಭಜನೀಯ ತೆರಿಗೆಗಳಿಗೆ ಸಂಬಂಧಿಸಿದಂತೆ ರಾಜ್ಯದ ಪಾಲು ಮತ್ತು ಭಾರತ ಸರ್ಕಾರದಿಂದ ಸ್ವೀಕರಿಸಲಾದಂತಹ ಅನುದಾನಗಳು ಹಾಗೂ ತತ್ಸಂಬಂಧಿತ ಹಿಂದಿನ ನಾಲ್ಕು ವರ್ಷಗಳ ಅಂಕಿ–ಸಂಖ್ಯೆಗಳನ್ನು **ಕೋಷ್ಟಕ – 1.1.1** ರಲ್ಲಿ ನೀಡಲಾಗಿದೆ.

**ಕೋಷ್ಟಕ 1.1.1**

**ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ**

(₹ ಕೋಟಿಯಲ್ಲಿ)

| ಕ್ರಮ ಸಂಖ್ಯೆ | ವಿವರಗಳು | 2015–16 | 2016–17 | 2017–18 | 2018–19 | 2019–20 |
|---|---|---|---|---|---|---|
| **1.** | ರಾಜ್ಯ ಸರ್ಕಾರವು ಸಂಗ್ರಹಿಸಿದ ರಾಜಸ್ವ/ವರಮಾನ | | | | | |
| | • ತೆರಿಗೆ ರಾಜಸ್ವ/ವರಮಾನ | 75,550.18 | 82,956.13 | 87,130.38 | 96,829.71 | **1,02,362.79** |
| | • ತೆರಿಗೆಯೇತರ ರಾಜಸ್ವ/ವರಮಾನ | 5,355.04 | 5,794.53 | 6,476.53 | 6,772.87 | **7,681.47** |
| | ಒಟ್ಟು | **80,905.22** | **88,750.66** | **93,606.91** | **1,03,602.58** | **1,10,044.26** |
| **2.** | ಭಾರತ ಸರ್ಕಾರದಿಂದ ಸ್ವೀಕೃತಿಗಳು | | | | | |
| | • ಕೇಂದ್ರದ ವಿಭಜನೀಯ ತೆರಿಗೆಗಳು ಮತ್ತು ಸುಂಕಗಳ ನಿವ್ವಳ ಸ್ವೀಕೃತಿಗಳ ಪಾಲು [1] | 23,983.34 | 28,759.94 | 31,751.96 | 35,894.83 | 30,919.00 |
| | • ಸಹಾಯಾನುಧಾನ | 13,928.75 | 15,703.19 | 21,640.78 | 25,481.25 | 34,479.53 |
| | ಒಟ್ಟು | **37,912.09** | **44,463.13** | **53,392.74** | **61,376.08** | **65,398.53** |
| **3.** | ರಾಜ್ಯ ಸರ್ಕಾರದ ಒಟ್ಟಾರೆ ರಾಜಸ್ವ/ವರಮಾನ ಸ್ವೀಕೃತಿಗಳು (1 ಮತ್ತು 2) | **1,18,817.31** | **1,33,213.79** | **1,46,999.65** | **1,64,978.66** | **1,75,442.79** |
| **4.** | ಒಟ್ಟಾರೆ ವರಮಾನ ಸ್ವೀಕೃತಿಗಳಿಗೆ ಹೋಲಿಸಿದಲ್ಲಿ ರಾಜ್ಯ ಸರ್ಕಾರವು ಸಂಗ್ರಹಿಸಿದ ಒಟ್ಟಾರೆ ಶೇಕಡವಾರು ವರಮಾನ (3ಕ್ಕೆ ಹೋಲಿಸಿದಲ್ಲಿ 1ರ ಶೇಕಡಾವಾರು) | **68** | **67** | **64** | **63** | **63** |

ಮೂಲ:2019–20 ಸಾಲಿಗೆ ರಾಜ್ಯ ಹಣಕಾಸು ಲೆಕ್ಕಪತ್ರಗಳು

2019–20 ಸಾಲಿನಲ್ಲಿ ರಾಜ್ಯ ಸರ್ಕಾರವು ಗಳಿಸಿದ ರಾಜಸ್ವವು/ವರಮಾನವು (₹ 1,10,044.26 ಕೋಟಿ) ಒಟ್ಟು ರಾಜಸ್ವ/ವರಮಾನ ಸ್ವೀಕೃತಿಗಳ ಶೇಕಡಾ 63ರಷ್ಟು ಆಗಿದ್ದಿತು ಎಂಬುದನ್ನು ಮೇಲಿನ ಕೋಷ್ಟಕವು

[1] 'ಎ ತೆರಿಗೆ ರಾಜಸ್ವ' ಅಡಿಯಲ್ಲಿದ್ದ ಲೆಕ್ಕಪತ್ರಗಳ ಪ್ರಧಾನ ಲೆಕ್ಕ ಶೀರ್ಷಿಕೆಗಳು 0005–ಕೇಂದ್ರ ಸರಕು ಮತ್ತು ಸೇವಾ ತೆರಿಗೆ, 0008–ಸಂಯೋಜಿತ ಸರಕು ಮತ್ತು ಸೇವಾ ತೆರಿಗೆ, 0020–ಸಂಸ್ಥೀಯ ತೆರಿಗೆ, 0021–ಸಂಸ್ಥೀಯ ತೆರಿಗೆಯಲ್ಲದ ಆದಾಯದ ಮೇಲಿನ ತೆರಿಗೆಗಳು, 0028–ಆದಾಯ ಮತ್ತು ವೆಚ್ಚಗಳ ಮೇಲಿನ ಇತರೆ ತೆರಿಗೆಗಳು–ಅಪ್ರಧಾನ ಲೆಕ್ಕ ಶೀರ್ಷಿಕ–901, 0032–ಆಸ್ತಿ ಮೇಲಿನ ತೆರಿಗೆಗಳು, 0037–ಸೀಮಾ ಸುಂಕ, 0038–ಕೇಂದ್ರ ಅಬಕಾರಿ ಸುಂಕಗಳು, 0044–ಸೇವಾ ತೆರಿಗೆ ಹಾಗೂ 0045–ಸಾಮಗ್ರಿಗಳು ಮತ್ತು ಸೇವೆಗಳ ಮೇಲಿನ ಇತರೆ ತೆರಿಗೆಗಳು ಮತ್ತು ಸುಂಕಗಳು–ಅಪ್ರಧಾನ ಲೆಕ್ಕ ಶೀರ್ಷಿಕೆ–901, ಇವುಗಳನ್ನು 2019–20ನೇ ಸಾಲಿಗೆ ಕರ್ನಾಟಕ ಸರ್ಕಾರದ ಹಣಕಾಸು ಲೆಕ್ಕಪತ್ರಗಳಲ್ಲಿ ದಾಖಲಿಸಿದ್ದಂತೆ ರಾಜ್ಯಗಳಿಗೆ ಹಂಚಿಕೆ ಮಾಡಲಾಗಿದ್ದ ನಿವ್ವಳ ಸ್ವೀಕೃತಿಗಳ ಪಾಲು, ಇವುಗಳ ಅಡಿಯಲ್ಲಿನ ಅಂಕಿಸಂಖ್ಯೆಗಳನ್ನು ರಾಜ್ಯ ಸರ್ಕಾರ ಗಳಿಸಿದ ತೆರಿಗೆಗಳಿಂದ ಪ್ರತ್ಯೇಕಿಸಿ ಕೇಂದ್ರದ ವಿಭಜನೀಯ ತೆರಿಗೆಗಳು ಮತ್ತು ಸುಂಕಗಳ ನಿವ್ವಳ ಸ್ವೀಕೃತಿಗಳ ಪಾಲಿನಲ್ಲಿ ಸೇರಿಸಲಾಗಿದೆ.

ಸೂಚಿಸುತ್ತದೆ. 2019–20 ಸಾಲಿನಲ್ಲಿನ ಉಳಿದ ಶೇಕಡಾ 37ರಷ್ಟು ಸ್ವೀಕೃತಿಗಳು ಭಾರತ ಸರ್ಕಾರದಿಂದ ಬಂದಿರುವುದು.

**1.1.2** 2015–16ರಿಂದ 2019–20ರ ಅವಧಿಯಲ್ಲಿ ಸಂಗ್ರಹಿಸಲಾದಂತಹ ತೆರಿಗೆ ರಾಜಸ್ವ/ವರಮಾನದ ವಿವರಗಳನ್ನು **ಕೋಷ್ಟಕ 1.1.2**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.1.2**
**ತೆರಿಗೆ ವರಮಾನದ ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವರಮಾನದ ಲೆಕ್ಕ ಶೀರ್ಷಿಕೆ | 2015–16 | | 2016–17 | | 2017-–18 | | 2018–19 | | 2019–20 | | 2018–19 ಕ್ಕೆ ಹೋಲಿಸಿದಲ್ಲಿ 2019–20ರಲ್ಲಿನ ಶೇಕಡಾವಾರು ಹೆಚ್ಚಳ (+)/ ಇಳಿಕೆ (–) | |
|---|---|---|---|---|---|---|---|---|---|---|---|---|---|
| | | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು / ಪರಿಷ್ಕೃತ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯ ವ್ಯಯ ಅಂದಾಜು | ವಾಸ್ತವಿಕ |
| 1. | ಮಾರಾಟಗಳು, ವಾಣಿಜ್ಯ ಮುಂತಾದವುಗಳ ಮೇಲಿನ ತೆರಿಗೆಗಳು | 41,329.00 | 40,448.63 | 46,504.10 | 46,105.17 | 24,485.68 | 25,093.16 | 13,532.05 | 14,003.06 | 15,149.00 | 16,424.32 | 11.94 | 17.29 |
| 2. | ರಾಜ್ಯ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ (ಎಸ್‌ಜಿಎಸ್‌ಟಿ) | --- | --- | --- | --- | 24,087.53 | 24,182.18 | 41,649.95 | 41,956.03 | 42,748.00 | 42,147.23[2] | 2.63 | 0.45 |
| 3. | ರಾಜ್ಯ ಅಬಕಾರಿ | 15,200.00 | 15,332.88 | 16,510.00 | 16,483.75 | 18,050.00 | 17,948.51 | 19,750.00 | 19,943.93 | 20,950.00 | 21,583.95 | 6.07 | 8.22 |
| 4. | ರಾಜ್ಯ ಅಬಕಾರಿ ಮತ್ತು ನೋಂದಣಿ ಶುಲ್ಕಗಳು | 8,200.00 | 8,214.71 | 9,100.00 | 7,805.98 | 9,000.00 | 9,023.68 | 10,400.00 | 10,774.69 | 11,828.00 | 11,308.34 | 13.73 | 4.95 |
| 5. | ವಾಹನಗಳ ಮೇಲಿನ ತೆರಿಗೆಗಳು | 4,800.00 | 5,001.69 | 5,160.00 | 5,594.39 | 6,006.00 | 6,208.57 | 6,656.42 | 6,567.67 | 7,100.00 | 6,762.58 | 6.66 | 2.96 |
| 6. | ಇತರವುಗಳು | 6,916.39 | 6,552.27 | 6,590.34 | 6,966.84 | 4,300.55 | 4,674.28 | 3,832.37 | 3,584.33 | 3,938.98 | 4,136.37 | 2.78 | 15.40 |
| **ಒಟ್ಟು** | | **76,445.39** | **75,550.18** | **83,864.44** | **82,956.13** | **85,929.76** | **87,130.38** | **95,820.79** | **96,829.71** | **1,01,713.98** | **1,02,362.79** | **6.15** | **5.71** |

ಮೂಲ:2019–20 ಸಾಲಿಗೆ ರಾಜ್ಯ ಹಣಕಾಸು ಲೆಕ್ಕಪತ್ರಗಳು

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ವ್ಯಾಪ್ತಿಯ ಅಡಿಯಲ್ಲಿ ತರದಿರುವಂತಹ ಸರಕುಗಳಿಗೆ ಮಾತ್ರ ಸೀಮಿತಗೊಂಡಿರುವಂತಹ ಮೌಲ್ಯ ವರ್ಧಿತ ತೆರಿಗೆ ವಸೂಲಾತಿ ಅಡಿಯಲ್ಲಿನ ಹೆಚ್ಚಳ ಹಾಗೂ ಈ ಹಿಂದಿನ ಅವಧಿಗೆ ಸಂಬಂಧಿತ ಬಾಕಿಗಳು ಹಿಂದಿನ ಸಾಲಿಗೆ ಹೋಲಿಸಿದಂತೆ ಗಮನಾರ್ಹ ಪ್ರಮಾಣದಲ್ಲಿರುವವು. 'ಇತರವುಗಳ' ಅಡಿಯಲ್ಲಿನ ವಸೂಲಾತಿಯು ಸಹ ವಿದ್ಯುತ್–ತೆರಿಗೆಯಲ್ಲಿನ ಹೆಚ್ಚಳದ ಕಾರಣ ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಳವನ್ನು ತೋರಿಸುತ್ತಿದ್ದಿತು.

**1.1.3** 2015–16ರಿಂದ 2019–20ರ ಅವಧಿಯಲ್ಲಿ ಸಂಗ್ರಹಿಸಲಾದಂತಹ ತೆರಿಗೆಯೇತರ ರಾಜಸ್ವ/ವರಮಾನದ ವಿವರಗಳನ್ನು **ಕೋಷ್ಟಕ 1.1.3**ರಲ್ಲಿ ನೀಡಲಾಗಿದೆ.

[2] ಬಡ್ಡಿ (₹ 106.28 ಕೋಟಿ), ದಂಡ (₹ 35.69 ಕೋಟಿ), ಶುಲ್ಕ (₹ 163.31 ಕೋಟಿ), ಖರೀದಿಗಳ ಮೇಲಿನ ತೆರಿಗೆ ಜಮೆ ಎಸ್‌ಜಿಎಸ್‌ಟಿ ಮತ್ತು ಐಜಿಎಸ್‌ಟಿ ಅಡ್ಡ–ಬಳಕೆ (₹ 14,809.94 ಕೋಟಿ), ತೆರಿಗೆ ಭಾಗದಲ್ಲಿನ ಐಜಿಎಸ್‌ಟಿ ಮೇಲಿನ ತೆರಿಗೆ ಒಳ–ವರ್ಗಾವಣೆಯನ್ನು ಎಸ್‌ಜಿಎಸ್‌ಟಿ ಮೇಲಿನ ತೆರಿಗೆಗೆ ಹಂಚಿಕೆ ಮಾಡಿರುವುದು (₹ 2,053.18 ಕೋಟಿ) ಮತ್ತು ಐಜಿಎಸ್‌ಟಿಯಿಂದ ಮುಂಗಡ ಹಂಚಿಕೆ (₹ 330.72 ಕೋಟಿ), ಇವುಗಳನ್ನು ಒಳಗೊಂಡಿರುತ್ತದೆ.

**ಕೋಷ್ಟಕ 1.1.3**
**ತೆರಿಗೆಯೇತರ ರಾಜಸ್ವ/ವರಮಾನದ ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವರಮಾನದ ಲೆಕ್ಕ ಶೀರ್ಷಿಕೆ | 2015–16 | | 2016–17 | | 2017–18 | | 2018–19 | | 2019–20 | | 2018–19 ಕ್ಕೆ ಹೋಲಿಸಿದಲ್ಲಿ 2019–20ರಲ್ಲಿನ ಶೇಕಡಾವಾರು ಹೆಚ್ಚಳ (+) / ಇಳಿಕೆ (–) | |
|---|---|---|---|---|---|---|---|---|---|---|---|---|---|
| | | ಆಯವ್ಯಯ ಅಂದಾಜು | ವಾಸ್ತವಿಕ | ಆಯ ವ್ಯಯ ಅಂದಾಜು | ವಾಸ್ತವಿಕ | ಆಯ ವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯ ವ್ಯಯ ಅಂದಾಜು | ವಾಸ್ತವಿಕ |
| 1. | ಕಬ್ಬಿಣೇತರ ಲೋಹಗಳ ಗಣಿಗಾರಿಕೆ ಮತ್ತು ಲೋಹ ಉದ್ಯಮಗಳು | 2,048.15 | 2,003.80 | 2,402.83 | 2,419.43 | 2,667.65 | 2,746.80 | 3,000.00 | 3,026.58 | 3,550.00 | 3,629.03 | 18.33 | 19.90 |
| 2. | ಇತರ[3] ತೆರಿಗೆಯೇತರ ಸ್ವೀಕೃತಿಗಳು | 3,158.02 | 3,351.24 | 3,817.62 | 3,375.10 | 4,276.97 | 3,729.73 | 5,180.94 | 3,746.29 | 4,505.41 | 4,052.44 | (–) 13.03 | 8.17 |
| **ಒಟ್ಟು** | | **5,206.17** | **5,355.04** | **6,220.45** | **5,794.53** | **6,944.62** | **6,476.53** | **8,180.94** | **6,772.87** | **8,055.41** | **7,681.47** | **(–) 1.53** | **13.41** |

ಮೂಲ:2019–20 ಸಾಲಿಗೆ ರಾಜ್ಯ ಹಣಕಾಸು ಲೆಕ್ಕಪತ್ರಗಳು

## 1.2 ರಾಜಸ್ವ/ವರಮಾನ ಬಾಕಿಗಳ ವಿಶ್ಲೇಷಣೆ

ರಾಜಸ್ವ/ವರಮಾನದ ಕೆಲವು ಪ್ರಧಾನ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ 31 ಮಾರ್ಚ್ 2020ರಲ್ಲಿದ್ದಂತೆ ರಾಜಸ್ವ/ವರಮಾನ ಬಾಕಿಗಳು **ಕೋಷ್ಟಕ – 1.2**ರಲ್ಲಿ ವಿವರಿಸಿರುವಂತೆ ₹19,549.97 ಕೋಟಿಯಷ್ಟಿದ್ದವು.

**ಕೋಷ್ಟಕ 1.2**
**ರಾಜಸ್ವ/ವರಮಾನ ಬಾಕಿಗಳು**

| ಕ್ರಮ ಸಂಖ್ಯೆ | ವರಮಾನದ ಲೆಕ್ಕ ಶೀರ್ಷಿಕೆ | 31 ಮಾರ್ಚ್ 2020ರಲ್ಲಿದ್ದಂತೆ ಬಾಕಿಯಿರುವ ಒಟ್ಟು ಮೊತ್ತ | ಇಲಾಖೆಯ ಉತ್ತರಗಳು |
|---|---|---|---|
| 1. | 0039 (ರಾಜ್ಯ ಅಬಕಾರಿ) | 761.73 | ಒಟ್ಟಾರೆ ಬಾಕಿಗಳ ಪೈಕಿ, ₹ 95.26 ಕೋಟಿ ಮೊತ್ತವು ನ್ಯಾಯಾಲಯಗಳ ತಡೆಯಾಜ್ಞೆಯ ಅಡಿಯಲ್ಲಿ ಹಾಗೂ ₹ 341.24 ಕೋಟಿ ಮೊತ್ತವು ಕಂದಾಯ ವಸೂಲಾತಿ ಪ್ರಮಾಣಪತ್ರಗಳಿಂದ ವ್ಯಾಪಿಸಿರುತ್ತದೆ. ಉಳಿದ ₹ 325.23 ಕೋಟಿ ಮೊತ್ತಕ್ಕೆ ಸಂಬಂಧಿಸಿದಂತೆ ವಸೂಲಾತಿ ಪ್ರಕ್ರಿಯೆಗಳು ವಿವಿಧ ಹಂತಗಳಲ್ಲಿದ್ದವು. |
| 2. | 0040 (ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲಿನ ತೆರಿಗೆಗಳು) | 18,626.74 | ಒಟ್ಟಾರೆ ಬಾಕಿಗಳ ಪೈಕಿ, ₹ 3,338.98 ಕೋಟಿ ಮೊತ್ತಕ್ಕೆ ನ್ಯಾಯಾಲಯಗಳಿಂದ ತಡೆಯಾಜ್ಞೆ ಇರುತ್ತದೆ, ₹ 806.65 ಕೋಟಿ ಮೊತ್ತವು ಬಿಐಎಫ್ಆರ್[4] /ಎಎಐಎಫ್ಆರ್[5], ಮುಂದಿದೆ, ₹ 835.79 ಕೋಟಿ ಮೊತ್ತಕ್ಕೆ ಸಂಬಂಧಿಸಿದಂತೆ ಸಂಸ್ಥೆಗಳು ಸಮಾಪನ ಪ್ರಕ್ರಿಯೆಯ ಅಡಿಯಲ್ಲಿವೆ, ₹ 141.15 ಕೋಟಿ ಮೊತ್ತವು ಕಂದಾಯ ವಸೂಲಾತಿ ಪ್ರಮಾಣ ಪತ್ರಗಳಿಂದ ವ್ಯಾಪಿಸಿವೆ, ₹13,412.00 ಕೋಟಿ ಮೊತ್ತವು ನ್ಯಾಯಾಲಯಗಳ ಹಾಗೂ ಇಲಾಖಾ ವಸೂಲಾತಿಯ ವ್ಯಾಪ್ತಿಯಲ್ಲಿವೆ ಹಾಗೂ ₹52.82 ಕೋಟಿ ಮೊತ್ತಕ್ಕೆ ಸಂಬಂಧಿಸಿದಂತೆ ವಸೂಲಾತಿಯು ಸಾಧ್ಯವಿಲ್ಲದೆಯೇ ದಾಖಲೆಗಳಿಂದ ತೆಗೆದುಹಾಕುವ (ರೈಟ್ ಆಫ್) ಪ್ರಸ್ತಾವನೆಯನ್ನು ಮಾಡಲಾಗಿದೆ ಹಾಗೂ ಸ್ವೀಕರಿಸಲಾಗಿರುವ ₹ 39.35 ಕೋಟಿ ಮೊತ್ತವು ಪರಿಶೀಲನೆಯ ಅಡಿಯಲ್ಲಿರುತ್ತದೆ. |
| 3. | 0030 (ಮುದ್ರಾಂಕ ಮತ್ತು ನೋಂದಣಿ) | 161.50 | ಇಲಾಖೆಯು ಮಾಹಿತಿಯನ್ನು ಒದಗಿಸಿರುವುದಿಲ್ಲ. |
| **ಒಟ್ಟು** | | **19,549.97** | |

ಮೂಲ: ಸಂಬಂಧಿತ ಇಲಾಖೆಗಳಿಂದ ಸ್ವೀಕರಿಸಲಾಗಿರುವ ಮಾಹಿತಿಯಂತೆ.

---

3 ಇತರೆ ತೆರಿಗೆಯೇತರ ಸ್ವೀಕೃತಿಗಳು ಬಡ್ಡಿ ಸ್ವೀಕೃತಿಗಳು, ಷೇರು ಲಾಭಾಂಶಗಳು ಮತ್ತು ಲಾಭಗಳು ಮತ್ತು ಸಾಮಾನ್ಯ, ಸಾಮಾಜಿಕ ಮತ್ತು ಆರ್ಥಿಕ ಸೇವೆಗಳಿಂದ ಇತರೆ ಸ್ವೀಕೃತಿಗಳನ್ನು ಒಳಗೊಂಡಿರುತ್ತವೆ.

4 ಕೈಗಾರಿಕಾ ಮತ್ತು ಹಣಕಾಸು ಪುನರ್–ನಿರ್ಮಾಣಕ್ಕಾಗಿನ ಮಂಡಳಿ.

5 ಕೈಗಾರಿಕಾ ಮತ್ತು ಹಣಕಾಸು ಪುನರ್–ನಿರ್ಮಾಣಕ್ಕಾಗಿನ ಮನವಿ ಪ್ರಾಧಿಕಾರ.

ಇಂಧನ, ಸಾರಿಗೆ ಮತ್ತು ಕಂದಾಯ ಇಲಾಖೆಗಳಿಗೆ ಸಂಬಂಧಿಸಿದಂತೆ ರಾಜಸ್ವ/ವರಮಾನದ ಬಾಕಿಗಳು, ಯಾವುದಾದರೂ ಇದ್ದಲ್ಲಿ, ಅವುಗಳ ವಿವರಗಳನ್ನು ಕೋರಲಾಗಿದೆಯಾದರೂ (ಡಿಸೆಂಬರ್ 2020), ಅವುಗಳ ಮಾಹಿತಿಯನ್ನು ಸ್ವೀಕರಿಸಲಾಗಿರುವುದಿಲ್ಲ (ಮೇ 2021).

## 1.3 ಇಲಾಖೆಗಳು ಪತ್ತೆಹಚ್ಚಿರುವಂತಹ ತೆರಿಗೆ ವಂಚನೆ ಪ್ರಕರಣಗಳು

ರಾಜ್ಯ ಅಬಕಾರಿ ಇಲಾಖೆ, ವಾಣಿಜ್ಯ ತೆರಿಗೆಗಳ ಇಲಾಖೆ ಮತ್ತು ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಗಳು ಪತ್ತೆಹಚ್ಚಿರುವಂತಹ ತೆರಿಗೆ ವಂಚನೆಯ ಪ್ರಕರಣಗಳ ವಿವರಗಳನ್ನು **ಕೋಷ್ಟಕ 1.3** ರಲ್ಲಿ ನೀಡಲಾಗಿದೆ.

**ಕೋಷ್ಟಕ 1.3**
**ತೆರಿಗೆ ವಂಚನೆಯ ಪ್ರಕರಣಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವರಮಾನದ ಲೆಕ್ಕ ಶೀರ್ಷಿಕೆ | 31 ಮಾರ್ಚ್ 2019ರಲ್ಲಿದ್ದಂತೆ ಬಾಕಿ ಇದ್ದ ಪ್ರಕರಣ ಗಳು | 2019–20ರಲ್ಲಿ ಪತ್ತೆಹಚ್ಚಲಾದ ಪ್ರಕರಣಗಳು | ಒಟ್ಟು | ಕರನಿರ್ಧಾರಣೆ/ವಿಚಾರಣೆ/ತನಿಖೆಗಳನ್ನು ಪೂರ್ಣಗೊಳಿಸಲಾಗಿರುವಂತಹ ಹಾಗೂ ದಂಡ ಇತ್ಯಾದಿಗಳ ಜೊತೆಯಲ್ಲಿ ಹೆಚ್ಚುವರಿ ತಗಾದೆಯನ್ನು ಸೃಷ್ಟಿಸಲಾದಂತಹ ಪ್ರಕರಣಗಳ ಸಂಖ್ಯೆ | | 31 ಮಾರ್ಚ್ 2020ರಲ್ಲಿದ್ದಂತೆ ಅಂತಿಮ ಗೊಳಿಸಲು ಬಾಕಿಯಿದ್ದಂತಹ ಪ್ರಕರಣಗಳ ಸಂಖ್ಯೆ |
|---|---|---|---|---|---|---|---|
| | | | | | ಪ್ರಕರಣಗಳ ಸಂಖ್ಯೆ | ಪಾವತಿಗಾಗಿ ತಗಾದೆಯ ಮೊತ್ತ | |
| 1. | 0039 (ರಾಜ್ಯ ಅಬಕಾರಿ)) | 02 | 01 | 03 | 00 | 00 | 03 |
| 2. | 0040 (ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲಿನ ತೆರಿಗೆ) | 5678 | 13083 | 18761 | 12054 | 1423.24 | 6707 |
| 3. | 0030 (ಮುದ್ರಾಂಕ ಮತ್ತು ನೋಂದಣಿ) | 09 | 01 | 10 | 00 | 00 | 10 |

ಮೂಲ:ಸಂಬಂಧಿತ ಇಲಾಖೆಗಳಿಂದ ಸ್ವೀಕರಿಸಲಾಗಿರುವ ಮಾಹಿತಿಯಂತೆ.

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆ ಮತ್ತು ರಾಜ್ಯ ಅಬಕಾರಿ ಇಲಾಖೆಗೆ ಸಂಬಂಧಿಸಿದಂತೆ ಪ್ರಕರಣಗಳ ಯಾವುದೇ ವಿಲೇವಾರಿಯೂ ಆಗಿರುವುದಿಲ್ಲ. ವಾಣಿಜ್ಯ ತೆರಿಗೆಗಳ ಇಲಾಖೆಗೆ ಸಂಬಂಧಿಸಿದಂತೆ ಶೇಕಡಾ 36ರಷ್ಟು ಪ್ರಕರಣಗಳು ವಿಲೇವಾರಿಗೊಳ್ಳುವುದು ಬಾಕಿಯಿರುವುದು. ವರಮಾನ ಸಂಗ್ರಹಣೆಯ ಹಿತದೃಷ್ಟಿಯಿಂದ ಈ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಸಲುವಾಗಿ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳಬೇಕು.

## 1.4 ಬಾಕಿಯಿರುವ ಮರುಪಾವತಿ ಪ್ರಕರಣಗಳು

ವಾಣಿಜ್ಯ ತೆರಿಗೆಗಳ ಇಲಾಖೆ, ರಾಜ್ಯ ಅಬಕಾರಿ ಇಲಾಖೆ ಹಾಗೂ ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಗಳು ವರದಿ ಮಾಡಿರುವಂತೆ, ವರ್ಷದ ಪ್ರಾರಂಭದಲ್ಲಿ ಬಾಕಿಯಿದ್ದಂತಹ ಮರುಪಾವತಿ ಪ್ರಕರಣಗಳ ಸಂಖ್ಯೆ, ಪ್ರಸಕ್ತ ಸಾಲಿನಲ್ಲಿ ಸ್ವೀಕರಿಸಲಾದಂತಹ ಮರುಪಾವತಿಗಾಗಿನ ಕೋರಿಕೆಗಳು, ಪ್ರಸಕ್ತ ಸಾಲಿನಲ್ಲಿ ನೀಡಲಾದ ಮರುಪಾವತಿಗಳು ಹಾಗೂ 2019–20 ಸಾಲಿನ ಅಂತ್ಯದಲ್ಲಿದ್ದಂತೆ ಬಾಕಿಯಿದ್ದಂತಹ ಪ್ರಕರಣಗಳ ಸಂಖ್ಯೆಯನ್ನು **ಕೋಷ್ಟಕ 1.4**ರಲ್ಲಿ ನೀಡಲಾಗಿದೆ.

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ. | ವಿವರಗಳು | ಮಾರಾಟಗಳ ಮೇಲಿನ ತೆರಿಗೆ/ಮೌಲ್ಯವರ್ಧಿತ ತೆರಿಗೆ | | ರಾಜ್ಯ ಅಬಕಾರಿ | | ಮುದ್ರಾಂಕಗಳು ಮತ್ತು ನೋಂದಣಿ | |
|---|---|---|---|---|---|---|---|
| | | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ |
| 1. | ವರ್ಷದ ಪ್ರಾರಂಭದಲ್ಲಿ ಬಾಕಿ ಇದ್ದಂತಹ ಮರುಪಾವತಿಗಾಗಿನ ಕೋರಿಕೆಗಳು | 2,316 | 433.70 | 00 | 00 | 1799 | 9.16 |

| | | | | | | | |
|---|---|---|---|---|---|---|---|
| 2. | ಮರುಪಾವತಿಗಾಗಿ ಪ್ರಸಕ್ತ ಸಾಲಿನಲ್ಲಿ ಸ್ವೀಕರಿಸಲಾದ ಕೋರಿಕೆಗಳು | 12,240 | 3,843.73 | ಮಾಹಿತಿಯನ್ನು ಒದಗಿಸಿರುವುದಿಲ್ಲ | 35.68 | 3445 | 18.42 |
| 3. | ಪ್ರಸಕ್ತ ಸಾಲಿನಲ್ಲಿ ಮಾಡಲಾದ ಮರುಪಾವತಿಗಳು | 12,671 | 3,888.50 | ಮಾಹಿತಿಯನ್ನು ಒದಗಿಸಿರುವುದಿಲ್ಲ | 35.68 | 2522 | 11.64 |
| 4. | ವರ್ಷದ ಅಂತ್ಯದಲ್ಲಿ ಬಾಕಿಯಿರುವ ಮರುಪಾವತಿ ಪ್ರಕರಣಗಳು | 1,885 | 388.93 | 00 | 00 | 2722 | 15.94 |

ಮೂಲ:ಸಂಬಂಧಿತ ಇಲಾಖೆಗಳಿಂದ ಸ್ವೀಕರಿಸಲಾಗಿರುವ ಮಾಹಿತಿಯಂತೆ.

ರಾಜ್ಯ ಅಬಕಾರಿ ಇಲಾಖೆಯು ಪ್ರಕರಣಗಳ ಸಂಖ್ಯೆಯನ್ನು ಒದಗಿಸಲಿಲ್ಲವಾದಲ್ಲಿ, ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಯ ಶೇಕಡಾ 48ಕ್ಕೆ ಹೋಲಿಸಿದಂತೆ ವಾಣಿಜ್ಯ ತೆರಿಗೆಗಳ ಇಲಾಖೆಗೆ ಶೇಕಡಾ 87ರಷ್ಟು ಮರುಪಾವತಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಸಾಧ್ಯವಾಗಿದ್ದಿತು.

## 1.5 ಲೆಕ್ಕಪರಿಶೋಧನೆಯ ಕಡೆಗೆ ಸರ್ಕಾರ/ಇಲಾಖೆಗಳ ಪ್ರತಿಕ್ರಿಯೆ

ಪ್ರಧಾನ ಮಹಾಲೇಖಪಾಲರು (ಆಡಿಟ್–I), ಇವರು ಹಣಕಾಸು ವ್ಯವಹಾರಗಳ ಪರೀಕ್ಷಾ–ಪರಿಶೀಲನೆ ಮಾಡುವ ಸಲುವಾಗಿ ನಿಗಧಿತ ನಿಯಮಗಳು ಮತ್ತು ಕಾರ್ಯವಿಧಾನಗಳ ಅನುಸಾರ ಪ್ರಮುಖವಾದಂತಹ ಲೆಕ್ಕಪತ್ರಗಳು ಹಾಗೂ ಇನ್ನಿತರೆ ದಾಖಲೆಗಳನ್ನು ಇಟ್ಟಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸರ್ಕಾರದ ಇಲಾಖೆಗಳನ್ನು ನಿಯತಕಾಲಿಕವಾಗಿ ಪರೀಕ್ಷಣೆ ಮಾಡುತ್ತಾರೆ. ಪರೀಕ್ಷಣೆಗಳ ಸಮಯದಲ್ಲಿ ಪತ್ತೆಹಚ್ಚಲಾದಂತಹ ಆದರೆ, ಸ್ಥಳದಲ್ಲಿಯೇ ಇತ್ಯರ್ಥಗೊಳಿಸಲು ಸಾಧ್ಯವಾಗದಂತಹ ನಿಯಮಬಾಹಿರತೆಗಳಿಗೆ ಸಂಬಂಧಿತ ಅಂಶಗಳನ್ನು ಅಳವಡಿಸಿಕೊಳ್ಳುವ ಮೂಲಕ ಪರೀಕ್ಷಣೆ ಮಾಡಲಾದಂತಹ ಕಚೇರಿಯ ಮುಖ್ಯಸ್ಥರಿಗೆ ಪರೀಕ್ಷಣಾ ವರದಿಗಳನ್ನು ನೀಡುವ ಮೂಲಕ ಹಾಗೂ ತ್ವರಿತ ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ, ಅದರ ಪ್ರತಿಗಳನ್ನು ಉನ್ನತ ಅಧಿಕಾರಿಗಳಿಗೆ ಕಳುಹಿಸಿಕೊಡುವ ಮೂಲಕ ಈ ಪರೀಕ್ಷಣೆಗಳಿಗೆ ಸಂಬಂಧಿಸಿದಂತೆ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಕಚೇರಿಗಳ ಮುಖ್ಯಸ್ಥರುಗಳು/ಸರ್ಕಾರ ಪರೀಕ್ಷಣಾ ವರದಿಗಳಲ್ಲಿ ಒಳಗೊಂಡಿರುವಂತಹ ಅಂಶಗಳಿಗೆ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳುವ, ತಪ್ಪುಗಳು ಹಾಗೂ ಲೋಪದೋಷಗಳನ್ನು ಸರಿಪಡಿಸುವ ಹಾಗೂ ಪರೀಕ್ಷಣಾ ವರದಿಗಳನ್ನು ನೀಡಿದ ದಿನಾಂಕದಿಂದ ಒಂದು ತಿಂಗಳಿನ ಒಳಗೆ ಪ್ರಧಾನ ಮಹಾಲೇಖಪಾಲರಿಗೆ ಪ್ರಾರಂಭಿಕ/ಮೂಲ ಉತ್ತರವನ್ನು ನೀಡುವ ಮೂಲಕ ಅನುಪಾಲನಾ ಕ್ರಮಗಳ ಬಗ್ಗೆ ವರದಿಯನ್ನು ಸಲ್ಲಿಸುವ ಅಗತ್ಯತೆಯಿರುತ್ತದೆ. ಹಣಕಾಸಿಗೆ ಸಂಬಂಧಿಸಿದಂತೆ ಗಮನಿಸಲಾದಂತಹ ಗುರುತರವಾದ ನಿಯಮಬಾಹಿರತೆಗಳನ್ನು ಇಲಾಖೆಗಳ ಮುಖ್ಯಸ್ಥರುಗಳಿಗೆ ಹಾಗೂ ಸರ್ಕಾರಕ್ಕೆ ವರದಿ ಮಾಡಲಾಗುವುದು.

1,652 ಪರೀಕ್ಷಣಾ ವರದಿಗಳಲ್ಲಿ (ಡಿಸೆಂಬರ್ 2019ರವರೆಗೆ ನೀಡಲಾದಂತಹ) ₹ 2,782.82 ಕೋಟಿ ಮೊತ್ತವು ಒಳಗೊಂಡಂತೆ 4,831 ಕಂಡಿಕೆಗಳು ಜೂನ್ 2020 ಅಂತ್ಯದಲ್ಲಿದ್ದಂತೆ ಬಾಕಿ ಉಳಿದಿದ್ದವು. ವಿವರಗಳನ್ನು ಹಿಂದಿನ ಎರಡು ವರ್ಷಗಳ ಅನುಗುಣವಾದಂತಹ ಅಂಕಿಸಂಖ್ಯೆಗಳ ಜೊತೆಯಲ್ಲಿ **ಕೋಷ್ಟಕ 1.5**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5**

**ಬಾಕಿ ಉಳಿದಿರುವಂತಹ ಪರೀಕ್ಷಣಾ ವರದಿಗಳ ವಿವರಗಳು**

| | ಜೂನ್ 2018ರಲ್ಲಿದ್ದಂತೆ | ಜೂನ್ 2019ರಲ್ಲಿದ್ದಂತೆ | ಜೂನ್ 2020ರಲ್ಲಿದ್ದಂತೆ |
|---|---|---|---|
| ಇತ್ಯರ್ಥಗೊಳ್ಳಲು ಬಾಕಿ ಉಳಿದಿರುವಂತಹ ಪರೀಕ್ಷಣಾ ವರದಿಗಳ ಸಂಖ್ಯೆ | 1,385 | 1,359 | 1,652 |
| ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು ಬಾಕಿ ಉಳಿದಿರುವ ಅಂಶಗಳ ಸಂಖ್ಯೆ | 4,099 | 3,802 | 4,831 |
| ಒಳಗೊಂಡಿರುವಂತಹ ರಾಜಸ್ವ/ವರಮಾನದ ಮೊತ್ತ (₹ ಕೋಟಿಯಲ್ಲಿ) | 1,467.14 | 1,822.98 | 2,782.82 |

**1.5.1** 30 ಜೂನ್ 2020ರಲ್ಲಿದ್ದಂತೆ ಬಾಕಿಯಿದ್ದಂತಹ ಪರೀಕ್ಷಣಾ ವರದಿಗಳು ಹಾಗೂ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳ ಇಲಾಖಾವಾರು ವಿವರಗಳನ್ನು **ಕೋಷ್ಟಕ 1.5.1** ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5.1**

**ಪರೀಕ್ಷಣಾ ವರದಿಗಳ ಇಲಾಖಾವಾರು ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ಇಲಾಖೆಯ ಹೆಸರು | ಸ್ವೀಕೃತಿಗಳ ಸ್ವರೂಪ | ಬಾಕಿ ಉಳಿದಿರುವಂತಹ ಪರೀಕ್ಷಣಾ ವರದಿಗಳ ಸಂಖ್ಯೆ | ಲೆಕ್ಕಪರಿಶೋಧನೆ ಯಲ್ಲಿ ಗಮನಿಸ ಲಾಗಿದ್ದು ಬಾಕಿ ಉಳಿದಿರು ವಂತಹ ಅಂಶಗಳ ಸಂಖ್ಯೆ | ಒಳಗೊಂಡಿ ರುವಂತಹ ಹಣಕಾಸಿನ ಮೌಲ್ಯ |
|---|---|---|---|---|---|
| 1. | ಹಣಕಾಸು | ವಾಣಿಜ್ಯ ತೆರಿಗೆಗಳು | 681 | 2,551 | 1,105.14 |
| 2. | | ರಾಜ್ಯ ಅಬಕಾರಿ | 71 | 91 | 15.63 |
| 3. | ಕಂದಾಯ | ಭೂ ಕಂದಾಯ | 209 | 453 | 254.28 |
| 4. | | ಮುದ್ರಾಂಕಗಳು ಮತ್ತು ನೋಂದಣಿ ಶುಲ್ಕಗಳು | 417 | 1,096 | 388.32 |
| 5. | ಸಾರಿಗೆ | ಮೋಟಾರು ವಾಹನಗಳ ಮೇಲಿನ ತೆರಿಗೆ | 182 | 420 | 46.55 |
| 6. | ವಾಣಿಜ್ಯ ಮತ್ತು ಕೈಗಾರಿಕೆಗಳು | ಕಬ್ಬಿಣೇತರ ಖನಿಜಗಳ ಗಣಿಗಾರಿಕೆ ಮತ್ತು ಲೋಹ ವಿಜ್ಞಾನ ಸಂಬಂಧಿತ ಕೈಗಾರಿಕೆಗಳು | 82 | 206 | 969.34 |
| 7. | ಇಂಧನ | ವಿದ್ಯುಚ್ಛಕ್ತಿಯ ಮೇಲಿನ ತೆರಿಗೆ | 10 | 14 | 3.56 |
| **ಒಟ್ಟು** | | | 1,652 | 4,831 | 2,782.82 |

2019-20ರಲ್ಲಿ ನೀಡಲಾಗಿದ್ದಂತಹ 254 ಪರೀಕ್ಷಣಾ ವರದಿಗಳ ಪೈಕಿ 140 ಪರೀಕ್ಷಣಾ ವರದಿಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಗೆ ಒಳಗಾದಂತಹ ಕಚೇರಿಗಳ ಮುಖ್ಯಸ್ಥರುಗಳಿಂದ ಲೆಕ್ಕಪರಿಶೋಧನೆಯು ಮೊದಲ/ಮೂಲ ಉತ್ತರವನ್ನೂ ಸಹ ಸ್ವೀಕರಿಸಿರುವುದಿಲ್ಲ (ಅಂತಹ ಪರೀಕ್ಷಣಾ ವರದಿಗಳನ್ನು ನೀಡಿದ ದಿನಾಂಕದಿಂದ ಒಂದು ತಿಂಗಳಿನ ಒಳಗೆ ಸ್ವೀಕರಿಸಲು ಅಗತ್ಯವಿದ್ದಿತಾದರೂ). ಉತ್ತರಗಳು ಸ್ವೀಕೃತಗೊಳ್ಳದಿದ್ದ ಕಾರಣದಿಂದಾಗಿ ಬಾಕಿ ಉಳಿದಿದ್ದಂತಹ ಪರೀಕ್ಷಣಾ ವರದಿಗಳ ಬಹಳಷ್ಟು ಸಂಖ್ಯೆಯು, ಪ್ರಧಾನ ಮಹಾಲೇಖಾಪಾಲರು ಪರೀಕ್ಷಣಾ ವರದಿಗಳಲ್ಲಿ ಸ್ಪಷ್ಟಪಡಿಸಿದ್ದಂತಹ ತಪ್ಪುಗಳು, ಲೋಪದೋಷಗಳು ಹಾಗೂ ನಿಯಮಬಾಹಿರತೆಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಕಚೇರಿಗಳ ಮತ್ತು ಇಲಾಖೆಗಳ ಮುಖ್ಯಸ್ಥರುಗಳು ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ ಎಂಬುದನ್ನು ಸೂಚಿಸುತ್ತಿದ್ದಿತು.

## 1.5.2 ಇಲಾಖಾ ಲೆಕ್ಕಪರಿಶೋಧನಾ ಸಮಿತಿಯ ಸಭೆಗಳು

ಪರೀಕ್ಷಣಾ ವರದಿಗಳಲ್ಲಿ ಒಳಗೊಂಡಿರುವಂತಹ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸುವ ಸಲುವಾಗಿ ಎಲ್ಲಾ ಇಲಾಖೆಗಳ ಸಚಿವಾಲಯದಲ್ಲಿ ಅಡ್‌ಹಾಕ್ ಸಮಿತಿಗಳನ್ನು ರಚಿಸುವಂತೆ ಸರ್ಕಾರವು ನಿರ್ದೇಶನಗಳನ್ನು ನೀಡಿದ್ದಿತು (ಮಾರ್ಚ್ 1968). ಈ ಸಮಿತಿಗಳು ಸಂಬಂಧಿತ ಆಡಳಿತಾತ್ಮಕ ಇಲಾಖೆಗಳ ಕಾರ್ಯದರ್ಶಿಯವರ ನೇತೃತ್ವದಲ್ಲಿದ್ದು ಹಾಗೂ ರಾಜ್ಯ ಸರ್ಕಾರದ ಪದನಿಮಿತ್ತ ಅಧಿಕಾರಿಗಳು ಹಾಗೂ ಪ್ರಧಾನ ಮಹಾಲೇಖಾಪಾಲರಿಂದ ನಾಮನಿರ್ದೇಶನವನ್ನು ಹೊಂದಿದ ಓರ್ವ ಅಧಿಕಾರಿಯವರು ಸಭೆಗೆ ಹಾಜರಾಗಬೇಕಿದ್ದಿತು. ಈ ಸಮಿತಿಗಳು ನಿಯತಕಾಲಿಕವಾಗಿ, ಯಾವುದೇ ಸಂದರ್ಭದಲ್ಲಿಯೂ ಕಡೆಯ ಪಕ್ಷ ಪ್ರತೀ ತ್ರೈಮಾಸಿಕದಲ್ಲಿ ಒಂದು ಸಲವಾದರೂ ಸಭೆ ಸೇರಬೇಕಿದ್ದಿತು. 2019–20 ಸಾಲಿನಲ್ಲಿ ನಡೆಸಲಾದಂತಹ ಅಡ್‌ಹಾಕ್ ಸಮಿತಿ ಸಭೆಗಳ ಸಂಖ್ಯೆ ಹಾಗೂ ಇತ್ಯರ್ಥಗೊಳಿಸಲಾದಂತಹ ಕಂಡಿಕೆಗಳ ಸಂಖ್ಯೆಯು ಕೋಷ್ಟಕ 1.5.2ರಲ್ಲಿ ತೋರಿಸಿರುವಂತಿದ್ದವು.

**ಕೋಷ್ಟಕ 1.5.2**

**ಇಲಾಖಾ ಲೆಕ್ಕಪರಿಶೋಧನಾ ಸಮಿತಿ ಸಭೆಗಳು**

(₹ಕೋಟಿಯಲ್ಲಿ)

| ಕ್ರಮ ಸಂಖ್ಯೆ | ಇಲಾಖೆ | ನಡೆಸಲಾದ ಸಭೆಗಳ ಸಂಖ್ಯೆ | ಇತ್ಯರ್ಥಗೊಳಿಸಲಾದ ಕಂಡಿಕೆಗಳ ಸಂಖ್ಯೆ | ಹಣಕಾಸಿನ ಮೌಲ್ಯ |
|---|---|---|---|---|
| 1. | ವಾಣಿಜ್ಯ ತೆರಿಗೆಗಳು | 7 | 70 | 13.99 |
| 2. | ರಾಜ್ಯ ಅಬಕಾರಿ | 1 | 22 | 8.35 |
| 3. | ಸಾರಿಗೆ | 1 | 65 | 6.08 |
| | ಒಟ್ಟು | 9 | 157 | 28.42 |

ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆ, ಗಣಿಗಳು ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಕಂದಾಯ ಇಲಾಖೆಗಳು, ಅಡ್‌ಹಾಕ್ ಸಮಿತಿಯ ಸಭೆಗಳನ್ನು ನಡೆಸಿರಲಿಲ್ಲ. ಬಾಕಿ ಉಳಿದಿರುವಂತಹ ಪರೀಕ್ಷಣಾ ವರದಿಗಳು ಹಾಗೂ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವಂತಹ ಅಂಶಗಳನ್ನು ಇತ್ಯರ್ಥಪಡಿಸುವ ಸಲುವಾಗಿ ಇಲಾಖಾ ಲೆಕ್ಕಪರಿಶೋಧನಾ ಸಭೆಗಳನ್ನು ನಡೆಸುವ ಸಲುವಾಗಿ ಸರ್ಕಾರವು ಇಲಾಖೆಗಳಿಗೆ ಸೂಕ್ತ ಆದೇಶವಗಳನ್ನು ನೀಡಬೇಕಿರುತದೆ.

## 1.5.3 ಲೆಕ್ಕಪರಿಶೋಧನೆಯ ಪರಿಶೀಲನೆಗಾಗಿ ದಾಖಲೆಗಳನ್ನು ಒದಗಿಸದಿದ್ದುದು

ರಾಜಸ್ವ/ವರಮಾನದ ಸ್ಥಳೀಯ ಲೆಕ್ಕಪರಿಶೋಧನೆಯ ಕಾರ್ಯಕ್ರಮವನ್ನು ಸಾಕಷ್ಟು ಮುಂಚಿತವಾಗಿ ತಯಾರಿಸಲಾಗುವುದು ಹಾಗೂ ಲೆಕ್ಕಪರಿಶೋಧನೆಯ ಪರಿಶೀಲನೆಗಾಗಿ ಸಂಬಂಧಿಸಿದ ದಾಖಲೆಗಳನ್ನು ಸಿದ್ಧವಾಗಿಡುವುದಕ್ಕೆ ಅನುಕೂಲ ಕಲ್ಪಿಸುವ ಸಲುವಾಗಿ ಈ ಬಗ್ಗೆ ತಿಳಿವಳಿಕೆ ಪತ್ರಗಳನ್ನು ಸಂಬಂಧಪಟ್ಟ ಕಚೇರಿ/ಇಲಾಖೆಗಳಿಗೆ ಮುಂಚಿತವಾಗಿ ಕಳುಹಿಸಿಕೊಡಲಾಗುವುದು.

2019–20 ಸಾಲಿನಲ್ಲಿ, ಹಣಕಾಸು, ಕಂದಾಯ, ಸಾರಿಗೆ, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಗಳ ಅಡಿಯಲ್ಲಿನ 254 ಕಚೇರಿಗಳನ್ನು ಲೆಕ್ಕಪರಿಶೋಧನೆಗಾಗಿ ಕೈಗೆತ್ತಿಕೊಳ್ಳಲಾಯಿತು. ಇವುಗಳ ಪೈಕಿ, ಮೂರು ಕಚೇರಿಗಳಲ್ಲಿ, ಈ ಕೆಳಗೆ ತಿಳಿಸಲಾಗಿರುವಂತಹ ದಾಖಲೆಗಳನ್ನು/ಕಡತಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ.

ಆದ್ದರಿಂದ, ಈ ಕೆಳಗೆ ನಮೂದಿಸಿರುವಂತಹ ಆ ಪ್ರಕರಣಗಳಲ್ಲಿ ಮಾಡಲಾದಂತಹ ಕರನಿರ್ಧಾರಣೆಗಳು ಹಾಗೂ ವಿಧಿಸಲಾದಂತಹ ತೆರಿಗೆಗಳು ಅಥವಾ ಸಂಗ್ರಹಿಸಲಾದಂತಹ ತೆರಿಗೆಗಳ ಯಥಾರ್ಥತೆಯನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ. ವಿವರಗಳನ್ನು **ಕೋಷ್ಟಕ 1.5.3** ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5.3**

**ಲೆಕ್ಕಪರಿಶೋಧನಾ ಪರಿಶೀಲನೆಗಾಗಿ ಒದಗಿಸದಿದ್ದಂತಹ ದಾಖಲೆಗಳ ವಿವರಗಳು**

| ಕ್ರಮ ಸಂಖ್ಯೆ | ಕಚೇರಿ/ಇಲಾಖೆಯ ಹೆಸರು | | ಕಚೇರಿಗಳ ಸಂಖ್ಯೆ | ಲೆಕ್ಕಪರಿಶೋಧನೆಗೆ ಒದಗಿಸದಿದ್ದ ದಾಖಲೆಗಳ ಸಂಖ್ಯೆ |
|---|---|---|---|---|
| 1. | ಹಣಕಾಸು ಇಲಾಖೆ | ವಾಣಿಜ್ಯ ತೆರಿಗೆಗಳು | 1 | ಒಂದು ಕಚೇರಿಯಲ್ಲಿ ನಾಲ್ಕು ವರ್ತಕರುಗಳಿಗೆ ಸಂಬಂಧಿತ 5 ಮರುಪಾವತಿ ಕಡತಗಳು |
| 2. | ಕಂದಾಯ ಇಲಾಖೆ | ಮುದ್ರಾಂಕಗಳು ಮತ್ತು ನೋಂದಣಿ ಶುಲ್ಕ | 2 | ಎರಡು ಕಚೇರಿಗಳಲ್ಲಿ ಹಣ ಪಾವತಿ ಮಾಡಿದ್ದರ ಚಲನ್ನುಗಳು |
| | ಒಟ್ಟು | | 3 | |

### 1.5.4 ಕರಡು ಲೆಕ್ಕಪರಿಶೋಧನಾ ಕಂಡಿಕೆಗಳಿಗೆ ಇಲಾಖೆಗಳ ಪ್ರತಿಕ್ರಿಯೆ

ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲು ಪ್ರಸ್ತಾಪಿಸಲಾಗಿರುವಂತಹ ಕರಡು ಕಂಡಿಕೆಗಳು ಪ್ರಧಾನ ಮಹಾಲೇಖಾಪಾಲರು ಸಂಬಂಧಿತ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ ಅರೆ–ಸರ್ಕಾರಿ ಪತ್ರಗಳ ಮೂಲಕ ಕಳುಹಿಸಿಕೊಡುವರು. ಸರ್ಕಾರವು ನೀಡಿರುವ (ಏಪ್ರಿಲ್ 1952) ನಿರ್ದೇಶನಗಳಂತೆ ಕರಡು ಕಂಡಿಕೆಗಳು ಸ್ವೀಕರಿಸಿದ ದಿನಾಂಕದಿಂದ ಆರು ವಾರಗಳ ಒಳಗೆ ಎಲ್ಲಾ ಇಲಾಖೆಗಳು ಕರಡು ಕಂಡಿಕೆಗಳ ಬಗ್ಗೆ ತಮ್ಮ ಟೀಕೆಟಿಪ್ಪಣಿಗಳನ್ನು/ಉತ್ತರಗಳನ್ನು ನೀಡುವ ಅಗತ್ಯತೆಯಿರುತ್ತದೆ. ಸರ್ಕಾರದಿಂದ ಉತ್ತರಗಳನ್ನು ಸ್ವೀಕರಿಸದೇ ಇರುವಂತಹ ವಾಸ್ತವಾಂಶವನ್ನು ಲೆಕ್ಕಪರಿಶೋಧನಾ ವರದಿಯಲ್ಲಿ ಅಂತಹ ಪ್ರತಿಯೊಂದು ಕಂಡಿಕೆಯ ಅಂತ್ಯದಲ್ಲಿಯೂ ತಪ್ಪದೇ ಸೂಚಿಸಲಾಗುವುದು.

31 ಮಾರ್ಚ್ 2020ಕ್ಕೆ ಅಂತ್ಯಗೊಂಡಂತಹ ಸಾಲಿಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸುವ ಸಲುವಾಗಿ ಪ್ರಸ್ತಾಪಿಸಲಾಗಿದ್ದಂತಹ 16 ಕರಡು ಕಂಡಿಕೆಗಳಲ್ಲಿ ಒಳಗೊಂಡಂತೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದಂತಹ ಹದಿನಾಲ್ಕು ಅಂಶಗಳನ್ನು ಸಂಬಂಧಿತ ಇಲಾಖೆಗಳ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು/ಪ್ರಧಾನ ಕಾರ್ಯದರ್ಶಿಗಳಿಗೆ ಡಿಸೆಂಬರ್ 2020 ಮತ್ತು ಫೆಬ್ರವರಿ 2021ರ ನಡುವೆ ಕಳುಹಿಸಿಕೊಡಲಾಗಿದ್ದಿತು.

ವಾಣಿಜ್ಯ ತೆರಿಗೆಗಳ ಇಲಾಖೆಯ 11 ಕರಡು ಕಂಡಿಕೆಗಳಿಗೆ ಸಂಬಂಧಿಸಿದಂತೆ, ಇಲಾಖೆಯಿಂದ ಉತ್ತರಗಳನ್ನು ಸ್ವೀಕರಿಸಲಾಯಿತು, ಅವುಗಳ ಪೈಕಿ ಮೂರು ಕರಡು ಕಂಡಿಕೆಗಳಿಗೆ ಉತ್ತರಗಳನ್ನು ಸರ್ಕಾರವು ಅನುಮೋದಿಸಿದ್ದಿತು.

ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಗೆ ಸಂಬಂಧಿತ ಐದು ಕರಡು ಕಂಡಿಕೆಗಳಿಗೆ ಸಂಬಂಧಿಸಿದಂತೆ, ಎಲ್ಲಾ ಐದು ಕರಡು ಕಂಡಿಕೆಗಳಿಗೆ ಇಲಾಖೆಯಿಂದ ಸಾಮಾನ್ಯ ಉತ್ತರಗಳನ್ನು ಸ್ವೀಕರಿಸಲಾಗಿರುವುದು. ಆದಾಗ್ಯೂ, ಇಲಾಖೆಯಿಂದಾಗಲೀ ಅಥವಾ ಸರ್ಕಾರದಿಂದಾಗಲೀ ಪ್ರಕರಣವಾರು ಉತ್ತರಗಳು ಸ್ವೀಕೃತಗೊಂಡಿರುವುದಿಲ್ಲ (ಮಾರ್ಚ್ 2021).

### 1.5.5 ಲೆಕ್ಕಪರಿಶೋಧನಾ ವರದಿಗಳಿಗೆ ಅನುಸರಣಾ ಕ್ರಮಗಳು–ಸ್ಥಿತಿಗತಿಗಳ ಸಂಕ್ಷಿಪ್ತ ಸಾರಾಂಶ

ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ (ಪಿ.ಎ.ಸಿ) ನಿಯಮಗಳು (ಆಂತರಿಕ ಕಾರ್ಯವಿಧಾನ) ಅನುಸಾರ ಲೆಕ್ಕಪರಿಶೋಧನಾ ವರದಿಯೊಂದನ್ನು ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟ ದಿನಾಂಕದಿಂದ ನಾಲ್ಕು ತಿಂಗಳುಗಳ ಒಳಗೆ ಸರ್ಕಾರದ ಇಲಾಖೆಗಳು ಲೆಕ್ಕಪರಿಶೋಧನಾ ಕಂಡಿಕೆಗಳ ಮೇಲೆ ಸವಿವರ ವಿವರಣೆಗಳನ್ನು (ಇಲಾಖಾ ಟಿಪ್ಪಣಿಗಳು) ಕರ್ನಾಟಕ ವಿಧಾನಸಭಾ ಸಚಿವಾಲಯಕ್ಕೆ ಸಲ್ಲಿಸುವ ಅಗತ್ಯತೆಯಿರುತ್ತದೆ. ಆ ರೀತಿ ಸಲ್ಲಿಸುವ ಮೊದಲು, ಅಂತಹ ಇಲಾಖಾ ಟಿಪ್ಪಣಿಗಳನ್ನು ಪ್ರಧಾನ ಮಹಾಲೇಖಾಪಾಲರ ಪರಿಶೀಲನೆಗೆ ಒಳಪಡಿಸಬೇಕೆಂಬುದರ ಅಗತ್ಯತೆಯನ್ನೂ ಸಹ ಈ ನಿಯಮಗಳು ಹೊಂದಿರುತ್ತವೆ.

ಕರ್ನಾಟಕ ಸರ್ಕಾರದ ರಾಜಸ್ವ ವಲಯದ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಆರು[6] ವರದಿಗಳಲ್ಲಿ 94 ಕಂಡಿಕೆಗಳನ್ನು (ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಗಳೂ ಸೇರಿದಂತೆ) ಸೇರಿಸಲಾಗಿದ್ದಿತು ಹಾಗೂ ಅವುಗಳನ್ನು ರಾಜ್ಯ ಶಾಸನ

---

[6] *1.* 31 ಮಾರ್ಚ್ 2015ಕ್ಕೆ ಅಂತ್ಯಗೊಂಡ ಸಾಲಿಗೆ ರಾಜಸ್ವ ವಲಯದ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ.

*2.* ಮಾರ್ಚ್ 2016ಕ್ಕೆ ಅಂತ್ಯಗೊಂಡ ಸಾಲಿಗೆ ರಾಜಸ್ವ ವಲಯದ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ.

*3.* ಮಾರ್ಚ್ 2017ಕ್ಕೆ ಅಂತ್ಯಗೊಂಡ ಸಾಲಿಗೆ ರಾಜಸ್ವ ವಲಯದ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ.

*4.* ಸರ್ಕಾರಿ ಭೂಮಿಯ ಹಂಚಿಕೆ, ಗುತ್ತಿಗೆ, ಒತ್ತುವರಿಗಳ ತೆರವುಗೊಳಿಸುವಿಕೆ ಹಾಗೂ ಅಕ್ರಮ ಹಿಡುವಳಿಗಳನ್ನು ಸಕ್ರಮಗೊಳಿಸಿಕೆ, ಇವುಗಳ ಮೇಲೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ.

*5.* ಮಾರ್ಚ್ 2018ಕ್ಕೆ ಅಂತ್ಯಗೊಂಡ ಸಾಲಿಗೆ ರಾಜಸ್ವ ವಲಯದ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ.

*6.* ಮಾರ್ಚ್ 2019ಕ್ಕೆ ಅಂತ್ಯಗೊಂಡ ಸಾಲಿಗೆ ರಾಜಸ್ವ ವಲಯದ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ.

ಸಭೆಯ ಮುಂದೆ ಮಾರ್ಚ್ 2016 ಮತ್ತು ಡಿಸೆಂಬರ್ 2020ರ ನಡುವಿನ ಅವಧಿಯಲ್ಲಿ ಮಂಡಿಸಲಾಗಿದ್ದಿತು.

ಏಪ್ರಿಲ್ 2021ರಲ್ಲಿದ್ದಂತೆ, 94 ಕಂಡಿಕೆಗಳ ಪೈಕಿ, 73 ಕಂಡಿಕೆಗಳಿಗೆ ಇಲಾಖಾ ಟಿಪ್ಪಣಿಗಳನ್ನು ಸ್ವೀಕರಿಸಲಾಯಿತು. 73 ಕಂಡಿಕೆಗಳ ಪೈಕಿ 72 ಕಂಡಿಕೆಗಳಿಗೆ ಇಲಾಖಾ ಟಿಪ್ಪಣಿಗಳನ್ನು ಆರರಿಂದ 20 ತಿಂಗಳುಗಳ ಸರಾಸರಿ ವಿಳಂಬದೊಂದಿಗೆ ಸ್ವೀಕರಿಸಲಾಗಿದ್ದಿತು. ಆದಾಗ್ಯೂ, ಮೂರು ಇಲಾಖೆಗಳಿಂದ (ವಾಣಿಜ್ಯ ತೆರಿಗೆಗಳು, ಮುದ್ರಾಂಕ ಮತ್ತು ನೋಂದಣಿ ಮತ್ತು ಗಣಿಗಳು ಮತ್ತು ಭೂವಿಜ್ಞಾನ) ಉಳಿದ 21 ಕಂಡಿಕೆಗಳಿಗೆ ಇಲಾಖಾ ಟಿಪ್ಪಣಿಗಳು ಇನ್ನೂ ಸ್ವೀಕೃತಗೊಂಡಿರುವುದಿಲ್ಲ

## 1.6 ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳ ಬಗ್ಗೆ ಅನುಸರಣಾ ಕ್ರಮಗಳನ್ನು ಅನುಸರಿಸುವ ಸಲುವಾಗಿನ ವ್ಯವಸ್ಥೆಯ ವಿಶ್ಲೇಷಣೆ

ಪರೀಕ್ಷಣಾ ವರದಿಗಳು/ಲೆಕ್ಕಪರಿಶೋಧನಾ ವರದಿಗಳಲ್ಲಿ ಎತ್ತಿತೋರಿಸಲಾಗಿರುವ ಅಂಶಗಳಿಗೆ ಅನುಸರಣಾ ಕ್ರಮಗಳನ್ನು ಅನುಸರಿಸುವ ಸಲುವಾಗಿನ ವ್ಯವಸ್ಥೆಯನ್ನು ವಿಶ್ಲೇಷಿಸುವುದಕ್ಕಾಗಿ ಒಂದು ಇಲಾಖೆಗೆ ಸಂಬಂಧಿಸಿದಂತೆ ಕಳೆದ ಹತ್ತು ವರ್ಷಗಳಲ್ಲಿ ನೀಡಲಾದಂತಹ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿದ್ದಂತಹ ಕಂಡಿಕೆಗಳು ಮತ್ತು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳ ಮೇಲೆ ತೆಗೆದುಕೊಳ್ಳಲಾದಂತಹ ಕ್ರಮಗಳನ್ನು ಮೌಲ್ಯಮಾಪನ ಮಾಡಲಾಯಿತು ಹಾಗೂ ಈ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲಾಯಿತು.

ಮುಂದಿನ 1.6.1 ಹಾಗೂ 1.6.2 ಕಂಡಿಕೆಗಳು, ಕಳೆದ ಹತ್ತು ವರ್ಷಗಳಲ್ಲಿ ಸ್ಥಳೀಯ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಕಂಡುಹಿಡಿಯಲಾದಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಜ್ಯ ಅಬಕಾರಿ[7] ಕಾರ್ಯನಿರ್ವಹಣೆಯನ್ನು ಹಾಗೂ ಅಲ್ಲದೆಯೇ 2009–10ರಿಂದ 2018–19 ಸಾಲುಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲ್ಪಟ್ಟಿರುವ ಪ್ರಕರಣಗಳನ್ನು ಚರ್ಚಿಸುತ್ತವೆ.

### 1.6.1 ಪರೀಕ್ಷಣಾ ವರದಿಗಳ ಸ್ಥಿತಿಗತಿ

ಕಳೆದ 10 ವರ್ಷಗಳಲ್ಲಿ ನೀಡಲಾದಂತಹ ಪರೀಕ್ಷಣಾ ವರದಿಗಳು, ಈ ವರದಿಗಳಲ್ಲಿ ಸೇರಿಸಲ್ಪಟ್ಟಿರುವ ಕಂಡಿಕೆಗಳು ಹಾಗೂ 31 ಮಾರ್ಚ್ 2020ರಲ್ಲಿದ್ದಂತೆ ಅವುಗಳ ಸ್ಥಿತಿಗತಿಗಳ ಒಂದು ಸಂಕ್ಷಿಪ್ತ ಚಿತ್ರಣವನ್ನು ಈ ಕೆಳಗಿನ **ಕೋಷ್ಟಕ 1.6.1**ರಲ್ಲಿ ಅಂಕಣಪಟ್ಟಿಯ ರೂಪದಲ್ಲಿ ನೀಡಲಾಗಿದೆ.

**ಕೋಷ್ಟಕ 1.6.1**
**ಪರೀಕ್ಷಣಾ ವರದಿಗಳ ಸ್ಥಿತಿಗತಿ**

(₹ ಕೋಟಿಯಲ್ಲಿ)

| ಕ್ರಮ ಸಂಖ್ಯೆ | ಸಾಲು | ಪ್ರಾರಂಭಿಕ ಶಿಲ್ಕು | | | ಪ್ರಸಕ್ತ ಸಾಲಿನಲ್ಲಿನ ಸೇರ್ಪಡೆ | | | ಪ್ರಸಕ್ತ ಸಾಲಿನಲ್ಲಿ ಇತ್ಯರ್ಥಗೊಂಡವುಗಳು | | | ಅಂತಿಮ ಶಿಲ್ಕು | | |
|---|---|---|---|---|---|---|---|---|---|---|---|---|---|
| | | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸಿನ ಮೌಲ್ಯ | ಪರೀಕ್ಷಣಾ ವರದಿ ಗಳು | ಕಂಡಿಕೆ ಗಳು | ಹಣಕಾಸಿನ ಮೌಲ್ಯ | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸಿನ ಮೌಲ್ಯ | ಪರೀಕ್ಷಣಾ ವರದಿಗಳು | ಕಂಡಿಕೆ ಗಳು | ಹಣಕಾಸಿನ ಮೌಲ್ಯ |
| 1. | 2010–11 | 954 | 1307 | 356.20 | 15 | 49 | 21.00 | 0 | 10 | 0.29 | 969 | 1346 | 376.91 |
| 2. | 2011–12 | 969 | 1346 | 376.91 | 1 | 1 | 0.01 | 0 | 0 | 0 | 970 | 1347 | 376.92 |
| 3. | 2012–13 | 970 | 1347 | 376.92 | 25 | 63 | 58.67 | 7 | 24 | 2.13 | 988 | 1386 | 433.46 |
| 4. | 2013–14 | 988 | 1386 | 433.46 | 18 | 230 | 13.18 | 12 | 90 | 56.42 | 994 | 1526 | 390.22 |
| 5. | 2014–15 | 994 | 1526 | 390.22 | 38 | 103 | 21.67 | 23 | 200 | 21.83 | 1009 | 1429 | 390.06 |
| 6. | 2015–16 | 1009 | 1429 | 390.06 | 31 | 66 | 9.40 | 38 | 85 | 11.72 | 1002 | 1410 | 387.74 |
| 7. | 2016–17 | 1002 | 1410 | 387.74 | 30 | 29 | 7.07 | 15 | 46 | 17.01 | 1017 | 1393 | 377.80 |
| 8. | 2017–18 | 1017 | 1393 | 377.80 | 27 | 36 | 4.39 | 819 | 707 | 316.48 | 225 | 722 | 65.71 |
| 9. | 2018–19 | 225 | 722 | 65.71 | 55 | 20 | 2.75 | 5 | 28 | 7.46 | 275 | 714 | 61.00 |
| 10. | 2019–20 | 275 | 714 | 61.00 | 10 | 16 | 1.94 | 6 | 33 | 12.49 | 279 | 697 | 50.45 |

[7] ವರಮಾನ ಲೆಕ್ಕ ಶೀರ್ಷಿಕೆ–0039ರ ಅಡಿಯಲ್ಲಿ.

ಮೇಲಿನ ಅವಧಿಯಲ್ಲಿ ಪರೀಕ್ಷಣಾ ವರದಿಗಳು/ಕಂಡಿಕೆಗಳನ್ನು ಇತ್ಯರ್ಥಗೊಳಿಸುವ ಸಲುವಾಗಿ ರಾಜ್ಯ ಅಬಕಾರಿ ಇಲಾಖೆಯಿಂದ 2017–18 ಮತ್ತು 2019–20ರಲ್ಲಿ ಎರಡು ಇಲಾಖಾ ಲೆಕ್ಕಪರಿಶೋಧನಾ ಸಮಿತಿ ಸಭೆಗಳು ನಡೆದಿದ್ದವು.

ಕಚೇರಿಗಳ ನಿಯತಕಾಲಿಕ ಪರೀಕ್ಷಣೆಗಳ ವೇಳೆಯಲ್ಲಿ, ಬಾಕಿ ಇರುವಂತಹ ಪರೀಕ್ಷಣಾ ವರದಿಗಳನ್ನು/ಕಂಡಿಕೆಗಳನ್ನು, ಸ್ಥಳದಲ್ಲಿಯೇ ಅನುಪಾಲನಾ ವರದಿಯನ್ನು ಪಡೆದುಕೊಂಡನಂತರ, ಸಮೀಕ್ಷಿಸಲಾಗುವುದು. ಇಲಾಖೆಗಳಿಂದ ಅನುಪಾಲನಾ ವರದಿಯು ಸ್ವೀಕೃತಗೊಂಡನಂತರ ಪರೀಕ್ಷಣಾ ವರದಿಗಳು/ಕಂಡಿಕೆಗಳನ್ನು ಸಹ ಇತ್ಯರ್ಥಗೊಳಿಸಲಾಗುವುದು.

### 1.6.2 ಇಲಾಖೆಗಳಿಂದ ಒಪ್ಪಿಕೊಳ್ಳಲಾಗಿರುವ ಪ್ರಕರಣಗಳಲ್ಲಿ ಮಾಡಲಾಗಿರುವ ವಸೂಲಾತಿ

ಕಳೆದ 10 ವರ್ಷಗಳಲ್ಲಿ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿರುವ ಕಂಡಿಕೆಗಳು, ಅವುಗಳ ಪೈಕಿ ಇಲಾಖೆಗಳು ಒಪ್ಪಿಕೊಂಡಿದ್ದವುಗಳು ಹಾಗೂ ಅವುಗಳಿಗೆ ಪ್ರತಿಯಾಗಿ ವಸೂಲಾತಿ ಮಾಡಲಾಗಿರುವ ಮೊತ್ತ, ಇವುಗಳ ಸ್ಥಿತಿಗತಿಯನ್ನು **ಕಂಡಿಕೆ 1.6.2**ರಲ್ಲಿ ನಮೂದಿಸಲಾಗಿದೆ.

**ಕೋಷ್ಟಕ 1.6.2**

**ಇಲಾಖೆಗಳಿಂದ ಒಪ್ಪಿಕೊಳ್ಳಲಾಗಿರುವ ಪ್ರಕರಣಗಳಲ್ಲಿ ಮಾಡಲಾಗಿರುವ ವಸೂಲಾತಿ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ. | ಲೆಕ್ಕ ಪರಿಶೋಧನಾ ವರದಿಯು ಸಂಬಂಧಿಸಿರುವ ಸಾಲು | ಸೇರಿಸಲಾಗಿದ್ದ ಕಂಡಿಕೆಗಳ ಸಂಖ್ಯೆ | ಕಂಡಿಕೆಗಳು ಒಳಗೊಂಡಿದ್ದ ಹಣಕಾಸಿನ ಮೌಲ್ಯ | ಒಪ್ಪಿಕೊಳ್ಳಲಾಗಿದ್ದ ಕಂಡಿಕೆಗಳ ಸಂಖ್ಯೆ | ಒಪ್ಪಿಕೊಳ್ಳಲಾಗಿದ್ದ ಕಂಡಿಕೆಗಳು ಒಳಗೊಂಡಿದ್ದ ಹಣಕಾಸಿನ ಮೌಲ್ಯ | 2019–20 ಸಾಲಿನಲ್ಲಿ ವಸೂಲಾತಿ ಮಾಡಲಾದ ಮೊತ್ತ | 31.3.2020 ರಲ್ಲಿದ್ದಂತೆ ಒಪ್ಪಿಕೊಳ್ಳಲಾಗಿದ್ದ ಕಂಡಿಕೆಗಳಲ್ಲಿ ಮಾಡಲಾಗಿರುವ ವಸೂಲಾತಿಯ ಕ್ರೋಢೀಕೃತ ಸ್ಥಿತಿಗತಿ |
|---|---|---|---|---|---|---|---|
| 1. | 2009–10 | 1 | 1.02 | 1 | 1.02 | – | – |
| 2. | 2010–11 | 1 ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆ | 181.68 | – | 9.19 | – | 0.15 |
| 3. | 2011–12 | – | – | – | – | – | – |
| 4. | 2012–13 | 2 | 3.09 | 2 | 3.09 | – | 0.17 |
| 5. | 2013–14 | 1 | 2.14 | 1 | 2.14 | – | 2.14 |
| 6. | 2014–15 | 4 | 10.57 | 3 | 10.37 | – | 9.62 |
| 7. | 2015–16 | – | – | – | – | – | – |
| 8. | 2016–17 | 1 ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆ | 132.57 | – | – | – | – |
| 9. | 2017–18 | – | – | – | – | – | – |
| 10. | 2018–19 | – | – | – | – | – | – |
| | **ಒಟ್ಟು** | **10** | **331.07** | **7** | **25.81** | | **12.08** |

ಮೇಲಿನ ಕೋಷ್ಟಕದಿಂದ ಕಾಣಬಹುದಾದಂತೆ, 2009–10ರಿಂದ 2018–19 ಸಾಲುಗಳಿಗೆ ಒಪ್ಪಿಕೊಳ್ಳಲಾಗಿರುವ ಪ್ರಕರಣಗಳಲ್ಲಿ ರಾಜ್ಯ ಅಬಕಾರಿ ಇಲಾಖೆಯು ಮಾಡಿರುವ ವಸೂಲಾತಿಯು ಕೇವಲ ಶೇಕಡಾ 46.80 ಆಗಿರುತ್ತದೆ. ಆದ್ದರಿಂದ, ಒಪ್ಪಿಕೊಳ್ಳಲಾಗಿರುವ ಪ್ರಕರಣಗಳಲ್ಲಿ ಒಳಗೊಂಡಿರುವ ಬಾಕಿಗಳ ವಸೂಲಾತಿಯ ಕ್ರಮಗಳನ್ನು ಅನುಸರಿಸಲು ಇಲಾಖೆಯು ತತ್‌ಕ್ಷಣದ ಕ್ರಮಗಳನ್ನು ಕೈಗೊಳ್ಳಬೇಕು.

## 1.7 ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಪೂರ್ವಭಾವಿ ಯೋಜನೆ

ವಿವಿಧ ಇಲಾಖೆಗಳ ಅಡಿಯಲ್ಲಿ ಲೆಕ್ಕಪರಿಶೋಧನೆ ಮಾಡಬೇಕಾದಂತಹ ಘಟಕಗಳನ್ನು/ಕಚೇರಿಗಳನ್ನು, ಅವುಗಳ ವರಮಾನ/ರಾಜಸ್ವದ ಸ್ಥಿತಿಗತಿ, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳ ಹಿಂದಿನ ಅವಧಿಗಳ ಪ್ರವೃತ್ತಿ ಮತ್ತು ಇನ್ನಿತರೆ ಪ್ರಮಿತಿಗಳಿಗೆ ತಕ್ಕಂತೆ ಅಧಿಕ, ಮಧ್ಯಮ ಹಾಗೂ ಅಲ್ಪ ಪ್ರಮಾಣದ ಸಂಭಾವ್ಯ ಅಪಾಯಗಳುಳ್ಳಂತಹ ಸಂಸ್ಥೆಗಳೆಂಬುದಾಗಿ ವರ್ಗೀಕರಿಸಲಾಗುವುದು. ವಾರ್ಷಿಕ ಲೆಕ್ಕಪರಿಶೋಧನಾ ಪೂರ್ವಭಾವಿ ಯೋಜನೆಯನ್ನು, ಇನ್ನಿತರವುಗಳೊಂದಿಗೆ ಸರ್ಕಾರದ ರಾಜಸ್ವ/ವರಮಾನಗಳಲ್ಲಿನ ಪ್ರಮುಖ ಅಂಶಗಳು ಹಾಗೂ ಆಯವ್ಯಯ ಭಾಷಣ, ರಾಜ್ಯದ ಹಣಕಾಸಿನ ಮೇಲಿನ ಶ್ವೇತ ಪತ್ರ, ಹಣಕಾಸು ಆಯೋಗದ ವರದಿಗಳು (ರಾಜ್ಯ ಮತ್ತು ಕೇಂದ್ರ), ತೆರಿಗೆ ಸುಧಾರಣಾ ಸಮಿತಿಯ ಶಿಫಾರಸುಗಳು, ಕಳೆದ ಐದು ವರ್ಷಗಳಲ್ಲಿನ ರಾಜಸ್ವ/ವರಮಾನ ಗಳಿಕೆಗಳ ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆ, ತೆರಿಗೆ ನಿರ್ವಹಣೆಯ ವೈಶಿಷ್ಟ್ಯತೆಗಳು, ಕಳೆದ ಐದು ವರ್ಷಗಳಲ್ಲಿ ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ಅದರ ಪ್ರಭಾವ, ಇತ್ಯಾದಿಗಳನ್ನು ಒಳಗೊಂಡಂತೆ ಸಂಭಾವ್ಯ ಅಪಾಯಗಳ ವಿಶ್ಲೇಷಣೆಯ ಆಧಾರದ ಮೇರೆಗೆ ತಯಾರಿಸಲಾಗುವುದು.

2019–20ರಲ್ಲಿ ಲೆಕ್ಕಪರಿಶೋಧನೆ ಮಾಡಬೇಕಾದಂತಹ 974 ಘಟಕ/ಕಚೇರಿಗಳಿದ್ದವು, ಅವುಗಳ ಪೈಕಿ 254 ಘಟಕ/ಕಚೇರಿಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನಾ ಪೂರ್ವಭಾವಿ ಯೋಜನೆಯನ್ನು ತಯಾರಿಸಲಾಯಿತು ಹಾಗೂ ಅವುಗಳ ಲೆಕ್ಕಪರಿಶೋಧನೆ ಮಾಡಲಾಯಿತು, ಇದು ಲೆಕ್ಕಪರಿಶೋಧನೆ ಮಾಡಬೇಕಾದ ಒಟ್ಟಾರೆ ಕಚೇರಿಗಳ ಶೇಕಡಾ 26 ಆಗಿದ್ದಿತು. ವಿವರಗಳನ್ನು **ಕೋಷ್ಟಕ 1.7.1** ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 1.7.1**
**ಲೆಕ್ಕಪರಿಶೋಧನೆ ಮಾಡಲಾದ ಘಟಕ/ಕಚೇರಿಗಳ ವಿವರಗಳು**

| ಕ್ರಮ ಸಂಖ್ಯೆ | ಇಲಾಖೆ | ಘಟಕಗಳ ಸಂಖ್ಯೆ | | |
|---|---|---|---|---|
| | | 2019–20 ಸಾಲಿನಲ್ಲಿ ಲೆಕ್ಕಪರಿಶೋಧನೆಗೆ ಒಳಪಡಿಸಬೇಕಿದ್ದ ಘಟಕ/ಕಚೇರಿಗಳು | 2019–20ರಲ್ಲಿ ಲೆಕ್ಕಪರಿಶೋಧನೆಗಾಗಿ ಪೂರ್ವಭಾವಿ ಯೋಜನೆ ಮಾಡಲಾದ ಘಟಕ/ಕಚೇರಿಗಳ ಸಂಖ್ಯೆ | 2019–20ರಲ್ಲಿ ಲೆಕ್ಕಪರಿಶೋಧನೆ ಮಾಡಲಾದ ಘಟಕ/ಕಚೇರಿಗಳು |
| 1. | ವಾಣಿಜ್ಯ ತೆರಿಗೆಗಳು | 430 | 134 | 134 |
| 2. | ಮುದ್ರಾಂಕ ಮತ್ತು ನೋಂದಣಿ | 285 | 58 | 59 |
| 3. | ರಾಜ್ಯ ಅಬಕಾರಿ | 134 | 19 | 18 |
| 4. | ಗಣಿಗಳು ಮತ್ತು ಭೂವಿಜ್ಞಾನ | 34 | 11 | 11 |
| 5. | ಸಾರಿಗೆ | 91 | 32 | 32 |
| | **ಒಟ್ಟು** | **974** | **254** | **254** |

## 1.8 ಲೆಕ್ಕಪರಿಶೋಧನೆಯ ಫಲಿತಾಂಶಗಳು

### ಪ್ರಸಕ್ತ ಸಾಲಿನಲ್ಲಿ ನಡೆಸಲಾದಂತಹ ಸ್ಥಳೀಯ ಲೆಕ್ಕಪರಿಶೋಧನೆಯ ಸ್ಥಿತಿಗತಿ

ಮಾರಾಟಗಳ ಮೇಲಿನ ತೆರಿಗೆ/ಮೌಲ್ಯ ವರ್ಧಿತ ತೆರಿಗೆ, ಮುದ್ರಾಂಕ ಮತ್ತು ನೋಂದಣಿ, ರಾಜ್ಯ ಅಬಕಾರಿ, ಮೋಟಾರು ವಾಹನಗಳ ಮೇಲಿನ ತೆರಿಗೆಗಳು, ಗಣಿಗಳು ಮತ್ತು ಭೂವಿಜ್ಞಾನ ಇಲಾಖಾ ಕಚೇರಿಗಳ 254 ಘಟಕ/ಕಚೇರಿಗಳ ದಾಖಲೆಗಳ 2019–20 ಸಾಲಿನಲ್ಲಿ ನಡೆಸಲಾದಂತಹ ಪರೀಕ್ಷಾ ಪರಿಶೀಲನೆಯು 1,189 ಕಂಡಿಕೆಗಳ ಮೂಲಕ ಸ್ಪಷ್ಟಪಡಿಸಲಾಗಿರುವಂತಹ ಪ್ರಕರಣಗಳಲ್ಲಿ ₹ 2,491.66 ಕೋಟಿ ಮೊತ್ತದಷ್ಟು ಒಟ್ಟಾರೆ ರಾಜಸ್ವ/ವರಮಾನವನ್ನು ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮಾಡಿರುವುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿರುವುದು/ರಾಜಸ್ವ/ವರಮಾನದ ನಷ್ಟ, ಇತ್ಯಾದಿಗಳನ್ನು ತೋರಿಸಿಕೊಟ್ಟಿತು. ಪ್ರಸಕ್ತ ಸಾಲಿನಲ್ಲಿ, ಸಂಬಂಧಪಟ್ಟ ಇಲಾಖೆಗಳು 2019–20 ಸಾಲಿನಲ್ಲಿ 190 ಕಂಡಿಕೆಗಳ ಮೂಲಕ ₹ 128.96 ಕೋಟಿ ಮೊತ್ತವು ಒಳಗೊಂಡಂತೆ ಸ್ಪಷ್ಟಪಡಿಸಲಾಗಿದ್ದಂತಹ ಕರನಿರ್ಧಾರಣೆಯನ್ನು ಕಡಿಮೆ ಪ್ರಮಾಣದಲ್ಲಿ ಮಾಡಿದ್ದುದು ಹಾಗೂ ಇನ್ನಿತರೆ ಲೋಪದೋಷಗಳನ್ನು ಒಪ್ಪಿಕೊಂಡಿದ್ದವು. ಈ ಹಿಂದಿನ ಸಾಲುಗಳ ಲೆಕ್ಕಪರಿಶೋಧನೆಯ ಅಂಶಗಳಿಗೆ ಸಂಬಂಧಿಸಿದಂತೆ

2019–20ರಲ್ಲಿ 564 ಕಂಡಿಕೆಗಳಲ್ಲಿ ಸ್ಪಷ್ಟಪಡಿಸಲಾಗಿದ್ದಂತಹ ₹ 72.10 ಕೋಟಿ ಮೊತ್ತವನ್ನು ಇಲಾಖೆಗಳು ವಸೂಲಾತಿ ಮಾಡಿದವು.

## 1.9 ಈ ವರದಿಯ ಭಾಗ–IIರ ವ್ಯಾಪ್ತಿ

ಈ ವರದಿಯ ಭಾಗ–IIರಲ್ಲಿ, ₹ 106.69 ಕೋಟಿ ಮೊತ್ತದಷ್ಟು ಹಣಕಾಸಿನ ಪ್ರಭಾವವನ್ನು ಒಳಗೊಂಡಂತೆ ಮೇಲೆ ಉಲ್ಲೇಖಿಸಲ್ಪಟ್ಟಿರುವಂತಹ ಸ್ಥಳಿಯ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಹಾಗೂ ಈ ಹಿಂದಿನ ಸಾಲುಗಳಲ್ಲಿ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವಂತಹ (ಹಿಂದಿನ ಸಾಲುಗಳ ವರದಿಗಳಲ್ಲಿ ಸೇರಿಸಲು ಸಾಧ್ಯವಾಗಿರದಿದ್ದಂತಹ) ಅಂಶಗಳಿಂದ ಆಯ್ಕೆ ಮಾಡಲಾಗಿರುವಂತಹ 14 ಕಂಡಿಕೆಗಳನ್ನು ಒಳಗೊಂಡಿರುತ್ತದೆ.

ಇಲಾಖೆಗಳು/ಸರ್ಕಾರವು ₹ 53.98 ಕೋಟಿ ಮೊತ್ತವು ಒಳಗೊಂಡಂತೆ 14 ಕಂಡಿಕೆಗಳಿಗೆ ಸಂಬಂಧಿಸಿದಂತೆ 515 ಪ್ರಕರಣಗಳಲ್ಲಿ ಲೆಕ್ಕಪರಿಶೋಧನೆಯ ಅಭಿಪ್ರಾಯಗಳನ್ನು ಒಪ್ಪಿಕೊಂಡವು ಹಾಗೂ ಅದರ ಪೈಕಿ 26 ಪ್ರಕರಣಗಳಲ್ಲಿ ₹ 0.89 ಕೋಟಿ ಮೊತ್ತವನ್ನು ವಸೂಲಾತಿ ಮಾಡಿದವು. ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರಗಳು ಸ್ವೀಕೃತಗೊಂಡಿರುವುದಿಲ್ಲ (ಏಪ್ರಿಲ್ 2021). ಇವುಗಳ ಬಗ್ಗೆ ಮುಂದಿನ ಅಧ್ಯಾಯಗಳು II ಮತ್ತು IIIರಲ್ಲಿ ಚರ್ಚಿಸಲಾಗಿದೆ.